ದಿನಾಂಕಃ 27-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದ</u>**

1. ನಾನು ದ್ವಿತೀಯ ಪಿ ಯು ಸಿ ವರೆಗೆ ಓದಿರುತ್ತೇನೆ. ನನ್ನ ತಂದೆ ಅಕ್ಷರಸ್ಥರು ಎಂದರೆ ಸರಿ. ನಾನು ನನ್ನ ವಿದ್ಯಾಭ್ಯಾಸವನ್ನು ಚನ್ನಗಿರಿ ಮತ್ತು ನಲ್ಲೂರಿನಲ್ಲಿ ಮುಗಿಸಿರುತ್ತೇನೆ. ನನ್ನ ತಂದೆ ಈ ದಾವೆಯ ಪ್ರತಿವಾದಿ, ನನ್ನ ತಂದೆಯ ತಂದೆ ಹೆಸರು ಶಾಂತವೀರಯ್ಯ ಎಂದರೆ ಸರಿ. ಈ ದಾವೆಯನ್ನು ವಾದಿ ನನ್ನ ತಂದೆಯ ವಿರುದ್ಧ ಹೂಡಿರುತ್ತಾರೆ. ನನಗೆ ಈ ದಾವೆಯ ಕುರಿತು ಪೂರ್ಣ ಮಾಹಿತಿ ಇದೆ. ವಾದಿ ಈ ದಾವೆಯನ್ನು ನನ್ನ ತಂದೆಯ ವಿರುದ್ಧ ನಮ್ಮ ಜಮೀನಿನ ಮೇಲೆ ಹಾದುಹೋಗಿರು ಕೆ ಪಿ ಟಿ ಸಿ ಎಲ್ ಲೈ ನ್ ನ ಪರಿಹಾರ ಕೋರಿ ಹೂಡಿರುತ್ತಾರೆ. ವಾದಿ ಈ ದಾವೆಗೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಈ ದಾವೆಗೆ ನಾನು ಸಲ್ಲಿಸಿರುವ ತಕರಾರು ಮತ್ತು ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಪಹಣಿ ಮತ್ತು ಆದಾರಪತ್ರದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವಾಸ್ತಿ ನನಗೆ ಗೊತ್ತು. ದಾವಾಸ್ತಿಯ ಸರ್ವೆ ನಂ 10/5. ಸರ್ವೆ ನಂ 10 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿ 150 ಎಕರೆಗೂ ಹೆಚ್ಚಾಗಿದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ 170 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಊರ ದನಗಳಿಗೆ ಮುಪತ್ತು ಎಂದು 143.21 ಎಕರೆ ಬಿಟ್ಟಿರುತ್ತಾರೆ ಎಂದರೆ ಸರಿ. 1 ಎಕರೆ ಜಮೀನನ್ನು ಸ್ಮಶಾನಕ್ಕೆ ಬಿಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಉಳಿದ ಜಮೀನುಗಳಿಗೆ ಸಾಗುವಳಿದಾರರಿಗೆ ಹಕ್ಕುಪತ್ರಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ನನ್ನ ತಂದೆಗೂ ಸಹ ಸದರಿ ಸರ್ವೆ ನಂ ನಲ್ಲಿ 2 ಎಕರೆ ದರ್ಖಾಸ್ತು ಮೂಲಕ ಮಂಜೂರಾಗಿದೆ ಎಂದರೆ ಸರಿ. 1978 ರಲ್ಲಿ ಸದರಿ ಜಮೀನು ಮಂಜೂರಾದ ಜಮೀನೇ ಈ ದಾವೆಯ ದಾವಾಸ್ತಿ ಎಂದರೆ ಸರಿ. ಸದರಿ ಮಂಜೂರಾದ ಕಾಲಕ್ಕೆ ಗಿಡಗಂಟೆಗಳು ಮತ್ತು ಸತ್ತೆ ಗಳು, ಉಬ್ಬು ತಗ್ಗುಗಳಿಂದ ಕೂಡಿದ್ದು ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ ಎಂದರೆ ಸರಿ. ಹಾಗಾಗಿ ನನ್ನ ತಂದೆ ಸದರಿ ಜಮೀನನ್ನು ಮಂಜೂರಾದ ಕಾಲದಿಂದಲೂ ಸಾಗು ಮಾಡಲಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ನನ್ನ ತಂದೆಗೆ ಮಂಜೂರಾದ ಕಾಲಕ್ಕೆ 14 ವರ್ಷ ವಯಸ್ಸಾಗಿತ್ತು. ಸದರಿ ಕಾಲಕ್ಕೆ ಸದರಿ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ತದ ನಂತರ ದಾವಾಸ್ತಿಯನ್ನು ನನ್ನ ತಂದೆಯಾದ ಪ್ರತಿವಾದಿ ವಾದಿಗೆ ನಿಡಿ-1 ರಂತೆ ಆಧಾರ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ಪ್ರತಿವಾದಿ ಮಾವಿನಕಟ್ಟೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಆಧಾರವಾಗಿ ಕೊಟ್ಟ ಸಮಯಕ್ಕೂ ಸಹ ಖುಷ್ಕಿ ಜಮೀನಾಗಿತ್ತು ಎಂದರೆ ಸರಿ.

2. ನಿಡಿ-1ರ ಸಮಯಕ್ಕೆ ನನ್ನ ತಂದೆ ವಾದಿಯಿಂದ 10 ಸಾವಿರ ರೂ.ಗಳಿಗೆ ದಾವಾಸ್ತಿಯನ್ನು ಆಧಾರ ಮಾಡಿಕೊಟ್ಟಿರುತ್ತಾರೆ. ಸದರಿ ನಿಡಿ-1 ಉಪ ನೊಂದಾಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಸದರಿ ದಾವಾಸ್ತಿಯನ್ನು ವಾದಿಗೆ ಯಾವ ಉದ್ದೇಶಕ್ಕಾಗಿ ಆಧಾರವಾಗಿಟ್ಟರು ಎಂದರೆ ಸಾಕ್ಷಿ ಮಾವಿನಕಟ್ಟೆಯಲ್ಲಿ 2 ಎಕರೆ ಜಮೀನನ್ನು ಖರೀದಿಸಬೇಕಾದ್ದರಿಂದ ಅದಕ್ಕೆ ಹಣ ಕಡಿಮೆ ಬಿದ್ದ ಕಾರಣ ವಾದಿಗೆ ದಾವಾಸ್ತಿಯನ್ನು ಆಧಾರವಾಗಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1ರ ನಂತರ ನನ್ನ ತಂದೆ ಮಾವಿನಕಟ್ಟೆಯಲ್ಲಿ ಸರ್ವೆ ನಂ 10 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಜಮೀನನ್ನು 1990ರಲ್ಲಿ ಖರೀದಿ ಮಾಡಿದ್ದು ಯಾರಿಂದ ಖರೀದಿ ಮಾಡಿದರು ಎಂದು ನನಗೆ ಮಾಹಿತಿ ಇಲ್ಲ.

3. ಸದರಿ ಅಧಾರಪತ್ರದಲ್ಲಿ 4 ವರ್ಷದೊಳಗೆ ಆಧಾರದ ಮೊತ್ತವನ್ನು ಹಿಂದಿರುಗಿಸಿ ಪತ್ರವನ್ನು ವಾಪಸ್ಸು ಪಡೆಯುವುದಾಗಿ ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ-1 ರ ಪುಟ ಸಂಖ್ಯೆ ರಲ್ಲಿರುವ ಸಹಿ ನನ್ನ ತಂದೆಯದು ಎಂದರೆ ಸರಿಯಲ್ಲ. ನಿಡಿ-1ರ ದಿನದಂದೇ ನನ್ನ ತಂದೆ ನಿಪಿ-1 ರಂತೆ ಕ್ರಯದ ಕರಾರುಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಗೆ ಅರಿವಿಲ್ಲದಂತೆ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1ರಂತೆ ಕರಾರುಪತ್ರವನ್ನು ಬರೆದುಕೊಟ್ಟ ತರುವಾಯ ನನ್ನ ತಂದೆ ದಾವಾಸ್ತಿಯ ಸ್ವಾಧೀನವನ್ನು ಬವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ದಿಃ 12-12-1990ರ ಮೂಲ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ಕಾಣಿಸುತ್ತಿರುವ ಸಹಿ ನನ್ನ ತಂದೆಯದು ಎಂದರೆ ಸರಿಯಲ್ಲ.

4. ನನ್ನ ತಂದೆ ಅಧಾರಪತ್ರ ಮಾಡಿಕೊಟ್ಟ ದಿನಾಂಕದಂದೇ ಕ್ರಯದ ಕಾರಾರು ಪತ್ರವನ್ನು ಸಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡೂ ಪತ್ರಗಳಿಗೂ ಸಹ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆಧಾರಪತ್ರದಲ್ಲಿರುವ ಸಹಿ ನನ್ನ ತಂದೆಯದು ಕರಾರುಪತ್ರದಲ್ಲಿನ ಸಹಿ ನನ್ನ ತಂದೆಯದು ಅಲ್ಲ ಎಂದು ನುಡಿಯುತ್ತಾರೆ. ಮಾವಿನಕಟ್ಟೆ ಗ್ರಾಮದಲ್ಲಿನ 2 ಎಕರೆ ಜಮೀನನ್ನು ಖರೀದಿಸಲು ನನ್ನ ತಂದೆಗೆ ಪುನಃ ಹಣ ಸಾಲದೆ ಬಂದ ಕಾರಣ ಸದರಿಯವರು ವಾದಿಯಿಂದ ಪುನಃ 25 ಸಾವಿರ ರೂ.ಗಳನ್ನು ಪಡೆದು ಕ್ರಯಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡೂ ಪತ್ರಗಳನ್ನು ಬರೆದವರು ನಲ್ಲೂರಿನ ಬಸವರಾಜಪ್ಪ ಎಂಬ ಪತ್ರ ಬರಹಗಾರರು ಎಂದರೆ ನನಗೆ ಗೊತ್ತಿಲ್ಲ.

5. ರಾಜಯ್ಯ ಬಿನ್ ಶಾಂತವೀರಯ್ಯ ನನ್ನ ಚಿಕ್ಕಪ್ಪ. ಸಿದ್ದಾಪುರ ಶಂಕರಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಇಬ್ಬರೂ ವ್ಯಕ್ತಿಗಳು ಸಾಕ್ಷಿದಾರರಾಗಿ ಆಧಾರಪತ್ರಕ್ಕೂ ಮತ್ತು ಕ್ರಯಕರಾರು ಪತ್ರಕ್ಕೂ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ದರ್ಖಾಸ್ತು ಜಮೀನಾದ ಕಾರಣ ವಾಯಿದೆ ಮುಗಿದ ತರುವಾಯ ಕ್ರಮವಾಗಿ ಕ್ರಯಪತ್ರವನ್ನು ಮಾಡಿಕೊಡುತ್ತೇನೆ ಎಂದು ನಿಪಿ-1ರ ಪುಟ ಸಂಖ್ಯೆ 2 ರಲ್ಲಿ " ಹಾಲಿ ಇ -ಸ್ವತ್ತು ನನಗೆ ದರ್ಖಾಸ್ತು ಮೂಲಕ ಬಂದ ಸ್ವಂತ್ತಾಗಿದ್ದು ಕ್ರಯ ನೊಂದಣಿ ಮಾಡಲು ಇನ್ನೂ ವಾಯಿದೆ ಇರುವುರಿಂದ ಈ ವಾಯಿದೆ ನಂತರ ನೀವು ಯಾವಾಗ ಕರೆದರೂ ಬಂದು ನಿಮಗೆ ನಿಮ್ಮ ಖರ್ಚಿನಲ್ಲಿ ಕ್ರಯ ರಿಜಿಸ್ಟರ್ ಮಾಡಿಕೊಡಲು ಸಿದ್ದನಿರುತ್ತೇನೆ ಅಲ್ಲಿಯವರೆಗೂ ಈ ಜಮೀನನ್ನು ನಿಮ್ಮ ಎಷ್ಟಾನುಸಾರ ಅನುಭವಿಸಬಹುದು" ಎಂದು ಉಲ್ಲೇಖವಿದೆ ಎಂದರೆ ಸರಿ. ನಿಪಿ1 ಮತ್ತು ನಿಡಿ-1 ಎರಡೂ ಪತ್ರಗಳು ಒಂದೇ ದಿನಾಂಕದಂದು ಬರವಣಿಗೆಯಾಗಿದೆ ಎಂದರೆ ಸರಿ. ಸದರಿ ಎರಡೂ ಪತ್ರಗಳ ದಾಖಲೆಯಾಗಿ ಸುಮಾರು 25 ವರ್ಷಗಳು ಮೇಲ್ಪಟ್ಟಿವೆ ಎಂದರೆ ಸರಿ.

6. ನಾನು 01-06-1977 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆ ಜೀವಂತವಿದ್ದಾರೆ. ಸದರಿಯವರು ವ್ಯವಸಾಯ ಮಾಡುತ್ತಾರೆ. ಸದರಿ ನಿಪಿ-1 ಮತ್ತು ನಿಡಿ-1ಕ್ಕೆ ನನ್ನ ತಂದೆಯೇ ಸಹಿ ಮಾಡಿರುವ ಕಾರಣ ಸದರಿ ದಾಖಲೆಗಳ ಕುರಿತು ನನ್ನ ತಂದೆಗೆ ಮಾಹಿತಿ ಇದೆಯೇ ಹೊರತು ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲ ಯಾವುದೇ ತೊಂದರೆಯಿಲ್ಲ ಎಂದರೆ ಸಾಕ್ಷಿ ವಯಸ್ಸಾದ ಕಾರಣ ಕಿವಿ ಕೇಳವುದಿಲ್ಲ, ಕಣ್ಣು ಮಬ್ಬಾಗಿ ಕಾಣುತ್ತದೆ ಎಂದು ನುಡಿಯುತ್ತಾರೆ, ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಕ್ರಯಕರಾರು ಪತ್ರದ ಕುರಿತು ನಿಜ ಹೊರಬರುವುದನ್ನು ತಪ್ಪಿಸಲು ನಾನು ಜಿ ಪಿ ಎ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ವಾದಿ ದಾವಾಸ್ತಿಯಲ್ಲಿ ಮಾವಿನಗಿಡವನ್ನು ಬೆಳೆಸಿದ್ದಾರೆ ಎಂದರೆ ಸಾಕ್ಷಿ ನಾವು ಬೆಳೆಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿಯಲ್ಲಿ 80 ಮಾವಿನ ಗಿಡಗಳಿದ್ದು ಅವುಗಳು ಯಾವ ತಳಿಯದು ಎಂದು ನನಗೆ ಗೊತ್ತಿಲ್ಲ. ಸದರಿ ಮಾವಿನಗಿಡಗಳ ವಯಸ್ಸು ಸುಮಾರು 25 ವರ್ಷಗಳ ಇರಬಹುದು. ಪ್ರಸ್ತುತ ನಾನು ವಮಾವಿನಕಟ್ಟೆ ಗ್ರಾಮವನ್ನು ಬಿಟ್ಟು ಶಿವಮೊಗ್ಗದ ಬಳಿ ಇರುವ ಸಿದ್ದಲಿಪುರ ಗ್ರಾಮದಲ್ಲಿ ನನ್ನ ತಂದೆಯೊಂದಿಗೆ 15 ವರ್ಷಗಳಿಂದ ವಾಸವಾಗಿದ್ದೇನೆ. ನನ್ನ ತಂದೆ ಮಾವಿನಕಟ್ಟೆ ಗ್ರಾಮವನ್ನು ಬಿಟ್ಟುಹೋದ ಕಾರಣ ದಾವಾಸ್ತಿಯ ಕ್ರಯನೊಂದಣಿಯ್ನು ಮಾಡಿಸಿಕೊಳ್ಳಲು ವಾದಿ ಸಾಕಷ್ಟು ಕಡೆ ಹುಡುಕಿದರೂ ಸಹ ದೊರೆಯದ ಕಾರಣ ನೊಂದಾಯಿತ

ಕ್ರಯಪತ್ರವನ್ನು ಮಾಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ನನ್ನ ತಂದೆ ಈಗಲೂ ದಾವಾಸ್ತಿಯ ಕ್ರಯನೊಂದಣಿಯನ್ನು ವಾದಿಗೆ ಬರೆದುಕೊಡಲು ಸಿದ್ದರಿದ್ದರು ಸಹ ನಾವು ತಡೆಯುತ್ತಿದ್ದೆವೆ ಎಂದರೆ ಸರಿಯಲ್ಲ.

8. ದಾವಾಸ್ತಿಯಲ್ಲಿ ನನ್ನ ತಂದೆ 1990ರಿಂದಲೂ ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದರ್ಖಾಸ್ತು ಮೂಲಕ ಮಂಜೂರಾದ ಆಸ್ತಿ ಯಾವ ಚೆಕ್ಕುಬಂದಿಯೊಳಗೆ ಮಂಜೂರಾಗಿತ್ತು ಎಂದರೆ ಸಾಕ್ಷಿ ಪಶ್ಚಿಮಕ್ಕೆ ಪಾಂಡುರಂಗ ಶೆಟ್ಟಿರವರ ಜಮೀನು, ಪೂರ್ವಕ್ಕೆ ಮಹೇಂದ್ರಚಾರಿಯವರ ಜಮೀನು. ಉತ್ತರಕ್ಕೆ ಗುಡ್ಡ ದಕ್ಷಿಣಕ್ಕೆ ರಸ್ತೆ ಇದೆ. ಸದರಿ ಕ್ರಯಕರಾರಿನಂತೆ ನನ್ನ ತಂದೆಗೆ ಬರಬೇಕಾದ ಯಾವುದೇ ಹಣ ಬಾಕಿ ಇಲ್ಲ ಎಂದರೆ ಸಾಕ್ಷಿ ಕ್ರಯಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ.

9. ದಾವಾಸ್ತಿಯಲ್ಲಿ ವಾದಿ ಮಾವಿನಗಿಡ ಬೆಳೆದಿದ್ದು, ಅವುಗಳನ್ನು ಕಡಿಯುವುದಾಗಿ ಕೆ ಪಿ ಟಿ ಸಿ ಎಲ್ ರವರು ನೋಟಿಸನ್ನು ಖಾತೆದಾರರಾದ ಪ್ರತಿವಾದಿಗೆ ಪರಿಹಾರ ಪಡೆಯಲು ಕೊಟ್ಟರು ಎಂದರೆ ಸರಿ. ಆಗ ನಾನು ನನ್ನ ತಂದೆ ಸ್ಥಳಕ್ಕೆ ಹೋಗಿ ಕೆ ಪಿ ಟಿ ಸಿ ಎಲ್ ದಿಂದ ಬರಬೇಕಾದ ಪರಿಹಾರವನ್ನು ಪಡೆಯಲು ಪ್ರಯತ್ನಿಸಿದೆವು ಎಂದರೆ ಸರಿ. ಸದರಿ ಸಮಯಕ್ಕೆ ಈ ದಾವೆಯ ವಾದಿ ಕೆ ಪ ಟಿಸಿ ಎಲ್ ಗೆ ತಕರಾರು ಅರ್ಜಿಯನ್ನು ಸಲಸ್ಲಿಸಿದ್ದು ದಾವಾಸ್ತಿಯಲ್ಲಿ ತಾನು ಬೆಳೆಸಿದಿದ್ದಾಗಿ ಹಾಗಾಗಿ ಸದರಿ ಪರಿಹಾರ ಹಣವನ್ನು ಪಡೆಯಲು ತಾನೇ ಹಕ್ಕುದಾರನೆಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಆದಕಾರಣ ಕೆ ಪಿ ಟಿ ಪಿ ಸಿ ಎಲ್ ನಿಂದ ವಾದಿಗಾಗಲಿ ಅಥವಾ ಪ್ರತಿವಾದಿಗಾಗಲಿ ಯಾವುದೇ ಪರಿಹಾರ ಬಂದಿಲ್ಲ ಎಂದರೆ ಸರಿ. ಪ್ರತಿವಾದಿ ಸದರಿ ಕೆ ಪಿ ಟಿ ಸಿ ಎಲ್ ನಿಂದ ಪರಿಹಾರವನ್ನು ಪಡೆಯಲು ಲಿಂಗನಹಳ್ಳಿಗೆ ಬಂದ ತರುವಾಯವೇ ಪ್ರತಿವಾದಿಯ ವಾಸ್ತವಿಕ ವಿಳಾಸ ವಾದಿಗೆ ತಿಳಿಯಿತು ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ವಾದಿ ಪ್ರತಿವಾದಿಯನ್ನು ನಿಪ-1 ರಂತೆ ಮಾಡಿಕೊಟ್ಟ ಕ್ರಯಕರಾರುಪತ್ರಕ್ಕೆ ಅನುಗುಣವಾಗಿ ಶುದ್ಧಕ್ರಯಪತ್ರನ್ನು ಬರೆದುಕೊಡುವಂತೆ ಕೋರಿದ್ದರ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿ ವಾದಿಗೆ ನೊಂದಾಯಿತ ಕ್ರಯಪತ್ರವನ್ನು ಮಾಡಿಕೊಡದ ಕಾರಣ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ.

10. ಯಾವುದೇ ಜಮೀನಿನ ಆಸ್ತಿಯ ವಿವರ ಸದರಿ ಜಮೀನಿನ ಮಾಲೀಕರಿಗಷ್ಟೆ ಗೊತ್ತಾಗುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ಮತ್ತು ಆಧಾರಪತ್ರವನ್ನು ಮಾಡಿಸಿಕೊಡುವವರಿಗಾಗಲಿ ಸದರಿ ಜಮೀನಿನ ವಿವರ ಗೊತ್ತಿರುವುದಿಲ್ಲ ಎಂದರೇ ಸರಿ. ನಿಪಿ-1 ರಲ್ಲಿ ಉಲ್ಲೇಖಿತವಾದ ಷೆಡ್ಯೂಲ್ ಆಸ್ತಿಯ ಚೆಕ್ಕುಬಂದಿಯ ಮಾಹಿತಿ ಕ್ರಯಪತ್ರವನ್ನು ಬರೆದುಕೊಡುವವರಿಗೆ ಮಾತ್ರ ಗೊತ್ತಿರುತ್ತದೆ ಎಂದರೆ ಸಾಕ್ಷಿ ಬೇಕಾದವರು ತಿಳಿದುಕೊಳ್ಳಬಹುದು ಎಂದು ನುಡಿಯುತ್ತಾರೆ. ನಿಪಿ-1ರಲ್ಲಿ ಉಲ್ಲೇಖಿತವಾದ ಷೆಡ್ಯೂಲ್ ಆಸ್ತಿಯ ಚೆಕ್ಕುಬಂದಿಯ ವಿವರ ನನ್ನ ತಂದೆಯ ಹೇಳಿಕೆಯಂತೆ ದಾಖಲಾಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಿಪಿ-1ಕ್ಕಾಗಲಿ ನಿಡಿ-1ಕ್ಕಾಗಲಿ ಓದಿದ ತರುವಾಯವೇ ಸಹಿ ಮಾಡುತ್ತಾರೆ ಎಂದರೆ ಸರಿ. ಅದರಂತೆ ನಿಪಿ-1ರಲ್ಲಿನ ಮಾಹಿತಿಯನ್ನು ಓದಿ ಸಹಿ ಮಾಡಲು ನನ್ನ ತಂದೆಗೆ ಯಾವುದೇ ಅಡ್ಡಿ ಆತಂಕ ಸದರಿ ಸಮಯಕ್ಕೆ ಇರಲಿಲ್ಲ.

11. ಸ್ಟಾಂಪ್ ವೆಂಡರ್ ಗಳು ಸಾಮಾನ್ಯವಾಗಿ ಪತ್ರಬರಹವಾದ ತರುವಾಯ ಖರೀದಿಸುವವರಿಗೆ ಮತ್ತು ಮಾರಾಟ ಮಾಡುವವರಿಗೆ ಅದರಲ್ಲಿನ ಸಂಗತಿಗಳನ್ನು ಓದಿ ತಿಳಿಸುತ್ತಾರೆ ಎಂದರೆ ಸರಿ. ನಿಪಿ-1 ಮತ್ತು ನಿಡಿ-1 ಎರಡೂ ಸಹ ಕನ್ನಡ ಭಾಷೆಯಲ್ಲಿದೆ ಎಂದರೆ ಸರಿ. ಆದ ಕಾರಣ ನಿಪಿ-1ಕ್ಕೆ ನನ್ನ ತಂದೆ ಓದಿ ತಿಳಿದುಕೊಂಡ ತರುವಾಯವೇ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪತ್ರದ ಸಾಕ್ಷಿದಾರರು ಮತ್ತು ಬರಹಗಾರರಿಗೆ ನಮ್ಮ ಮೇಲೆ ಯಾವುದೇ ದ್ವೇಷವಿಲ್ಲ ಎಂದರೆ ಸರಿ. ನನ್ನ ತಂದೆಗೆ ಸ್ಟಾಂಪ್ ವೆಂಡರ್ ಆದ ಬಸವರಾಜಪ್ಪನವರ ಪರಿಚಯವಿಲ್ಲ ಆದರೆ ಸಾಕ್ಷಿದಾರರ ಪರಿಚಯವಿದೆ. ಹಾಗಾಗಿ ನಿಪಿ-1ರ ಸಮಯಕ್ಕೆ ನನ್ನ ತಂದೆಯಿಂದಲೇ ಎಲ್ಲ ಮಾಹಿತಿಯನ್ನು ಪಡೆದು ಸದರಿ ಪತ್ರವನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿ ಅದೇ ದಿನ ನಿಡಿ-1ರ ಪತ್ರವಾಗಿರುವ ಕಾರಣ ಅದರಲ್ಲಿನ ಮಾಹಿತಿಯನ್ನು ಪಡೆದು ನಿಪಿ-1ನ್ನು ಮಾಡಿರಬಹುದು ಎಂದು ನುಡಿಯುತ್ತಾರೆ.

12. ನಿಪಿ-1ರಲ್ಲಿನ ಆಸ್ತಿಯ ವಿವರ ಮತ್ತು ಚೆಕ್ಕುಬಂದಿ ವಾದಿಗೆ ಗೊತ್ತಿರಲಿಲ್ಲ ನನ್ನ ತಂದೆಗೆ ಮಾತ್ರ ಗೊತ್ತಿತ್ತು ಎಂದರೆ ಸರಿ. ನಿಪಿ-1ರಲ್ಲಿ ಉಲ್ಲೇಖಿತವಾದ ದಾವಾಸ್ತಿಯ ಚೆಕ್ಕಬಂದಿಗೂ ಪ್ರಸ್ತುತ ದಾವಾಸ್ತಿಯ ಚೆಕ್ಕುಬಂದಿಯೂ ಸಹ ಒಂದೇ ಆಗಿದೆ ಎಂದರೆ ಸರಿ. ಕ್ರಯಕರಾರು ಪತ್ರದಲ್ಲಿನ ಚೆಕ್ಕುಬಂದಿಯನ್ನು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ-1 ರಲ್ಲಿನ ಉಲ್ಲೇಖಿತವಾದ ಹಣವನ್ನು

ಪಡೆದ ನನ್ನ ತಂದೆ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1ರ ಕುರಿತು ನನಗೆ ಈ ದಾವೆ ಹೂಡಿದ ತರುವಾಯ ತಿಳಿದುಬಂದಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಂದೆಗೂ ಸಹ ಆಗಲೇ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರ ತಿಳಿದ ತರುವಾಯ ಪೊಲೀಸರಿಗೆ ದೂರನ್ನು ಕೊಡಲು ಯಾವುದೇ ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ದಾವೆ ಬಾಕಿ ಇರುವ ಕಾರಣ ನಾವು ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ ಎಂದುನುಡಿಯುತ್ತಾರೆ. ವಾದಿ ಕೆ ಪಿ ಟಿ ಸಿ ಎಲ್ ರವರಿಗೆ ತಕರಾರು ಅರ್ಜಿಯಲ್ಲಿ ನಮೂದಿಸಿದ ಕ್ರಯಕರಾರಿನ ವಿಚಾರದ ಕುರಿತು ನಾವು ಆತನ ವಿರುದ್ದ ಯಾವುದೇ ಕಾನೂನು ಕ್ರಮವನ್ನುಕೈಗೊಳ್ಳಲಿಲ್ಲ.

13. ವಾದಿಗೆ ದಾವಾಸ್ತಿಯನ್ನು ಸ್ವಾಧೀನ ಕೊಟ್ಟ ತರುವಾಯ ದಾವಾಸ್ತಿ ಖುಷ್ಕಿ ಜಮೀನಾಗಿ ಉಳಿದಿಲ್ಲ ಎಂದರೆ ಸಾಕ್ಷಿ ನಾವು ಸ್ವಾಧೀನ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ವಾದಿ ನಿಪಿ-1ರ ತರುವಾಯ ಪ್ರತಿವಾದಿಯಿಂದ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ತಯಾರು ಇದ್ದರು ಸಹ ನಾವು ಮಾವಿನಕಟ್ಟೆ ಗ್ರಾಮದಲ್ಲಿ ವಾಸವಿಲ್ಲದ ಕಾರಣ ವಿಳಾಸ ತಿಳಿಯದೇ ಇದ್ದ ಕಾರಣ ವಾದಿ ಸುಮ್ಮನಿದ್ದರು ಎಂದರೆ ಸರಿಯಲ್ಲ. ನಾವು ಎಲ್ಲಿ ವಾಸವಾಗಿದ್ದೆವು ಎಂಬ ಮಾಹಿತಿಯನ್ನು ವಾದಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಈಗಲೂ ಸಹ ದಾವಾಸ್ತಿಯ ಮೇಲೆ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ಸಿದ್ದನಿದ್ದರು ಸಹ ನಾವು ಪ್ರತಿವಾದಿಯನ್ನು ದಾರಿತಪ್ಪಿಸುತ್ತಿದ್ದೆವೆ ಎಂದರೆ ಸರಿಯಲ್ಲ. ನನಗಾಗಲಿ, ಪ್ರತಿವಾದಿಗಾಗಲಿ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ವಾದಿ ನ್ಯಾಯಾಲಯದಲ್ಲಿಕೇಳಿರುವ ಪರಿಹಾರವನ್ನುಪಡೆಯಲು ನನಗೇನು ತಕರಾರು ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಜಮೀನನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.